



ದ್ವಾರಪಾಲಕ ಮತ್ತು ಹರಿಹರ



ಭೂವರಾಹಮೂರ್ತಿ

ರಾಮಾಯಣದ ರಾವಣನಿಗೂ ಈ ಗುಹೆಗೂ ಯಾವ ಸಂಬಂಧವೂ ಇಲ್ಲ. ರಾವಳಫಡಿ ಎಂಬ ಹೆಸರು ಕಾಲಾಂತರದಲ್ಲಿ ರಾವಣನ ಹೆಸರು ಅಂಟಿಸಿಕೊಂಡಿರಬಹುದು. ರಾವಣಫಡಿ ಅಥವಾ ರಾವಳಫಡಿ ಎಂಬ ಹೆಸರಿನಿಂದ ಕರೆಯಲಾಗುವ ಗುಹಾದೇವಾಲಯಗಳು, ಐಹೊಳೆಯ ದುರ್ಗದೇವಾಲಯ ಸಂಕೀರ್ಣದ ಸನಿಹದಲ್ಲೇ ಇವೆ. ದುರ್ಗದೇವಾಲಯದ ಎದುರು ದಿಕ್ಕಿಗೆ ಕಣ್ಣು ಹೊರಳಿಸಿದರೆ ಸ್ವಲ್ಪದೂರದಲ್ಲಿ ಹುಚ್ಚಮಲ್ಲಿ ಗುಡಿಯ ಗೋಪುರ ಕಾಣಿಸುತ್ತದೆ. ಈ ಗುಡಿಯ ರಸ್ತೆಯಲ್ಲೇ ಮುಂದೆ ರಾವಣಫಡಿಯ ಗುಹೆಗಳನ್ನು ತಲುಪಬಹುದು.

ಬಾದಾಮಿಯ ಗುಹೆಗಳಿಗೆ ಹೋಲಿಸಿದರೆ, ರಾವಣಫಡಿಯ ಪ್ರವೇಶದ್ವಾರ ಕಿರಿದು. ಸಮಾನದೂರದಲ್ಲಿ ನಾಲ್ಕು ಕಂಬಗಳುಳ್ಳ ಪ್ರವೇಶದ ಆಚೀಚೆ ಕಿರುಮಂಟಪಗಳೊಳಗೆ ಶಂಖನಿಧಿ, ಪದ್ಮನಿಧಿ ದೇವಾಲಯಗಳಿವೆ. ಬದಿಯಲ್ಲಿ ಕಂಬದಂಚಿಗೆ ತೀರಾ ಸಾಧಾರಣ ವೇಷ ತೊಟ್ಟ ದ್ವಾರಪಾಲಕರ ಚಿತ್ರಣವಿದೆ. ಇದು ಒಂದೇ ಬೃಹದಾಕಾರದ ಕಲ್ಲಿನ ಬಂಡೆಯನ್ನು ಕೊರೆದು ಮಾಡಿದ ರಚನೆ. ಆವರಣದಲ್ಲಿ ಗುಡಿಯತ್ತ ಮುಖಮಾಡಿ ಕುಳಿತ ನಂದಿಯ ಭಗ್ನವಿಗ್ರಹವನ್ನು ದಾಟಿ ಎರಡು ಹಂತದ ಸೋಪಾನವೇರಿ ಗುಹೆಯೊಳಗೆ ಹೋಗಬೇಕು. ಇಲ್ಲಿ ತೆರೆದುಕೊಳ್ಳುವ ದೃಶ್ಯವೈಭವ ಸಾವಿರದೈನೂರು ವರ್ಷಗಳಿಗೂ ಹಳೆಯದು!

ಗುಹೆಯನ್ನು ಎರಡು ಭಾಗಗಳಾಗಿ ಕೊರೆಯಲಾಗಿದೆ. ಮೊದಲನೆಯದು ಮಹಾಮಂಟಪ. ಒಳಗಿನದು ಅಂತರಾಳ. ಮಂಟಪದಲ್ಲಿ ಮತ್ತೆ ಎಡಬಲಗಳಲ್ಲಿ ಒಂದೊಂದು ಪ್ರತ್ಯೇಕ ಕೋಷ್ಠ. ಒಳಗೆ ಕಾಲಿರಿಸುತ್ತಿರುವಂತೆ ಎದುರಿಗೆ ಶಿವನ ವಿವಿಧ ರೂಪಗಳನ್ನು ಕಾಣಿಸುವ ಆಳೆತ್ತರದ ಶಿಲ್ಪಗಳಿವೆ. ಹರಿಹರನ ಶಿಲ್ಪವು ಬಲ ಮೇಲುಗೈಯಲ್ಲಿ ಸರ್ಪವನ್ನೂ ಎಡ ಮೇಲುಗೈಯಲ್ಲಿ ಶಂಖವನ್ನೂ ಧರಿಸಿದೆ. ಶಿರದ ಬಲಭಾಗದಲ್ಲಿ ಗಂಗೆ, ಚಂದ್ರರೂ ಎಡಭಾಗದಲ್ಲಿ ರತ್ನಮುಕುಟವೂ ಕಾಣುತ್ತದೆ. ಬಲಗೈಯಲ್ಲಿ ಅಕ್ಷಮಾಲೆಯನ್ನು ಧರಿಸಿ, ಎಡಗೈಯನ್ನು ಸೊಂಟದ ಮೇಲಿರಿಸಿರುವ ಮಂದಸ್ಮಿತದ ಶಿಲ್ಪವು ಮನೋಹರವಾಗಿದೆ. ಹರಿಹರ ಶಿಲ್ಪದ ಎದುರಿನ ಗೋಡೆಯ ಮೇಲೆ ಶಿವಪಾರ್ವತಿಯರ ಶಿಲ್ಪವಿದೆ.

ಗುಹೆಯ ಒಳಭಾಗದಲ್ಲಿ ಮಹಿಷಮರ್ದಿನಿಯ ಶಿಲ್ಪವಿದೆ. ಅಷ್ಟಭುಜಗಳಲ್ಲಿ ಬಗೆಬಗೆಯ ಆಯುಧಗಳನ್ನು ಧರಿಸಿರುವ ದೇವಿಯ ಶಿಲ್ಪವಿದು. ಮಹಿಷನನ್ನು ಮೆಟ್ಟಿ ತನ್ನ ಕೈಯಿಂದ ಆತನ ಕುತ್ತಿಗೆಯನ್ನು ಬಿಗಿಹಿಡಿದು ಆಯುಧದಿಂದ ಇರಿಯುತ್ತಿರುವ ಭಂಗಿ ವಿಶೇಷವಾಗಿದೆ. ಇದರ ಎದುರುಗೋಡೆಯ ಮೇಲೆ ಭೂವರಾಹಮೂರ್ತಿಯ ಶಿಲ್ಪವಿದೆ. ಬಲಗೈಯನ್ನು ಸೊಂಟದ ಮೇಲಿರಿಸಿಕೊಂಡು ತನ್ನ ಎಡಗೈಯಿಂದ ಲೀಲಾಜಾಲವಾಗಿ ಭೂದೇವಿಯನ್ನು ಎತ್ತಿ ಹೆಗಲಮೇಲೆ ಕುಳ್ಳಿರಿಸಿಕೊಳ್ಳುತ್ತ ಎಡಪಾದವನ್ನು ತುಸು ಮೇಲೆತ್ತಿದ ಚಲನಾತ್ಮಕ ಭಂಗಿ ಸೊಗಸಾಗಿ ನಿರೂಪಿತವಾಗಿದೆ. ಒಳಭಾವಣೆಯಲ್ಲಿ ಗರುಡವಾಹನ ವಿಷ್ಣು, ಕಮಲ, ಐರಾವತವೇರಿದ ಇಂದ್ರ ಮೊದಲಾದವನ್ನು ಕಾಣಬಹುದು.

ಒಳಗುಡಿಯಿಂದ ಹೊರಬರುತ್ತಿರುವಂತೆ ಬಲಕ್ಕೆ ಆಳೆತ್ತರದ ದ್ವಾರಪಾಲಕನ ಮೂರ್ತಿ ಇದೆ. ಮಂಟಪದ ಇನ್ನೊಂದು ಕೋಷ್ಠದಲ್ಲಿ ಹತ್ತು ಭುಜಗಳ ನಟರಾಜ ಶಿವನ ಮೂರ್ತಿ ಇದೆ. ಮೇಲಿನೆರಡು ಕೈಗಳಲ್ಲಿ ಮೇಲೆತ್ತಿ ಹಿಡಿದ ಸರ್ಪ, ಉಳಿದಂತೆ ಹಲವು ಕೈಗಳಲ್ಲಿ ಬಗೆಬಗೆಯ ಆಯುಧಗಳು. ಮುಂದಿನ ಬಲಗೈಯಲ್ಲಿ ನಾಟ್ಯಮುದ್ರೆ. ಎಡಬಲಗಳಲ್ಲಿ ಗಣೇಶ, ಸ್ಕಂದರು. ನಟರಾಜನಷ್ಟೇ ವಿಶೇಷವಾದ ಶಿಲ್ಪಗಳೆಂದರೆ ಪಕ್ಕದಲ್ಲಿರುವ ಸಪ್ತಮಾತೃಕೆಯರು. ಶಿವನ ಎಡಬಲಗಳಲ್ಲಿರುವ ಈ ದೇವತೆಯರೂ ನಾಟ್ಯಭಂಗಿಯಲ್ಲಿದ್ದಾರೆ. ನೀಳವಾದ ಕಿರೀಟಗಳು, ಸರಳ ಉಡುಗೆತೊಡುಗೆಗಳಿಂದ ಶೋಭಿಸುವ ಈ ಶಿಲ್ಪಗಳು ಸಪ್ತಮಾತೃಕೆಯರ ಶಿಲ್ಪಗಳಲ್ಲೇ ಅತಿ ವಿಶಿಷ್ಟವೆನಿಸಿವೆ. ಬಾಗಿಲಿನತ್ತ ಒಳಗೋಡೆಯ ಮೇಲೆ ಅರ್ಧನಾರೀಶ್ವರನ ರೂಪವನ್ನು ಕೆತ್ತಲಾಗಿದೆ. ಆಳೆತ್ತರದ ಈ ಶಿಲ್ಪ ಸೂಕ್ಷ್ಮವಿವರಗಳಿಂದ ಗಮನ ಸೆಳೆಯುತ್ತದೆ.

ರಾವಣಫಡಿಯ ಗುಹೆಯ ಇಕ್ಕೆಲಗಳಲ್ಲಿ ಒಂದೊಂದು ಚಿಕ್ಕಗುಡಿಯಿದ್ದು, ಅವು ದೇಗುಲ ನಿರ್ಮಾಣದ ಪ್ರಯೋಗಾತ್ಮಕ ಪ್ರಯತ್ನದಂತೆ ಗೋಚರಿಸುತ್ತವೆ.